# ವಾರ್ಡ್ ಸಭೆ ಸಂಖ್ಯೆ.28

ದಿನಾಂಕ:.19.02.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ (ಅಧ್ಯಕ್ಷರು)
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ (ಕಾರ್ಯದರ್ಶಿ)
3. ಶ್ರೀ ಜಯಪಾಲ್ ಸದಸ್ಯರು.
4. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5. ಶ್ರೀ ನಂಜೇಗೌಡ ಸದಸ್ಯರು.
6. ಶ್ರೀ ರಾಜೇಶ್ ಸದಸ್ಯರು.
7. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
8. ಶ್ರೀ ನಾಗೇಂದ್ರ ಸದಸ್ಯರು.
9. ಶ್ರೀ ಗೋಪಿ ಸದಸ್ಯರು.
10. ಶ್ರೀಮತಿ ಡಾ॥ ಮಮತ ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
11. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಚಾಯಪತಿ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
13. ಶ್ರೀ ವಿಠಲ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ ಮೀಟರ್ ರೀಡರ್), ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ಆರ್. ಮುನೇಶ ಎ.ಎಸ್.ಐ, ಆರ್.ಎಂ.ಸಿ ಯಾರ್ಡ್ ಪೋಲೀಸ್ ಠಾಣೆಯ ಅಧಿಕಾರಿ.
16. ಶ್ರೀ ರಂಗಸ್ವಾಮಯ್ಯ ಎನ್, ಎ.ಎಸ್.ಐ ನಂದಿನಿ ಲೇಔಟ್ ಪೋಲೀಸ್ ಠಾಣೆಯ ಅಧಿಕಾರಿ.
17. ಶ್ರೀ ಎಚ್.ಎನ್ ರಮೇಶ್, ಎ.ಎಸ್.ಐ ಮಹಾಲಕ್ಷ್ಮೀ ಲೇಔಟ್ ಪೋಲೀಸ್ ಠಾಣೆಯ ಅಧಿಕಾರಿ.
18. ಶ್ರೀ ಮಂಜು ಸಿ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಸಾರ್ವಜನಿಕರು ಮನೆ ನಂ.156, ಆರ್.ಎಂ.ಸಿ ಯಾರ್ಡ್‌ಗೆ ಹೋಗುವ ಮುಖ್ಯರಸ್ತೆ, ಮೆಟ್ಟಲಿನ ಹತ್ತಿರ, ಕೆ.ಎಚ್.ಬಿ ಕಾಲೋನಿಯ ರಸ್ತೆಯಲ್ಲಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ನೀರಿನ ಪೈಪ್ ರಿಪೇರಿ ಮಾಡಲು ರಸ್ತೆ ಅಗೆತವನ್ನು ಮಾಡಿರುತ್ತಾರೆ ಆದ್ದರಿಂದ ರಸ್ತೆ ರಿಪೇರಿ ಮಾಡಿಸಿಕೊಡಬೇಕೆಂದು ಕೋರಿದೆ. ಇದಕ್ಕೆ ಕಾರ್ಯದರ್ಶಿಗಳು ಸರಿಪಡಿಸಲಾಗುವುದು ಎಂದು ತಿಳಿಸಿದರು. | – |
| 4. | ಸಾರ್ವಜನಿಕರು ನಂಜುಂಡೇಶ್ವರನಗರದಲ್ಲಿ ಚರಂಡಿ ಹೂಳು ತೆಗೆಯುವ ಕಾಮಗಾರಿಯ ಸರಿಯಾಗಿ ನಡೆಯುತ್ತಿರುವುದಿಲ್ಲ ಎಂದು ತಿಳಿಸಿದರು. | – |
| 5. | ಸಾರ್ವಜನಿಕರು ಸ್ವತ್ತಿನ ಸಂಖ್ಯೆ.92, ಕೆ.ಎಚ್.ಬಿ ಕಾಲೋನಿ ಹತ್ತಿರ ಇರುವ ಹಳೆಯ ಖಾರ್ಖಾನೆ ನಿರ್ವಹಣೆ ಇಲ್ಲದ ಕಾರಣ ಸದರಿ ಕಾರ್ಖಾನೆಯಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುತ್ತವೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸ್ಥಳಕ್ಕೆ ಬೇಟಿ ನೀಡಲಾಗುವುದು ಎಂದು ತಿಳಿಸಿದರು. | – |
| 6. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು ಕೋವಿಡ್ ಮತ್ತು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರದ ಶ್ರೀಮತಿ ಡಾ॥ ಮಮತ ರವರು ಮಾಹಿತಿ ನೀಡಿದರು. | – |
| 7. | ಶ್ರೀ ನಾಗೇಂದ್ರ ಸದಸ್ಯರು ಪ್ರಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂಧಿಸಿದಂತೆ ರಕ್ತ ಪರೀಕ್ಷೆ, ಡೆಂಗ್ಯೂ, ಚಿಕನ್ ಗುನ್ಯ ಪರೀಕ್ಷೆಗಳು ನಡೆಸುವುದರ ಬಗ್ಗೆ ಮತ್ತು ಪೋಲಿಯೋ ಲಸಿಕೆ ಬಗ್ಗೆ ಮಾಹಿತಿ ಕೋರಿದರು ಇದಕ್ಕೆ ಶ್ರೀಮತಿ ಡಾ॥ ಮಮತ ರವರು ಎಲ್ಲಾ ಪರೀಕ್ಷೆಗಳು ಮಾಡಲಾಗುತ್ತಿರುತ್ತದೆ ಎಂದು ತಿಳಿಸಿದರು. | – |

Scanned with CamScanner

| | | |
|---|---|---|
| 8. | ಶ್ರೀ ಗೋಪಿ ಸದಸ್ಯರು ರವರು 1ನೇ ಅಡ್ಡರಸ್ತೆ ಸೋಮೇಶ್ವರನಗರದ ಕೊಳವೆಬಾವಿಯಿಂದ ನೀರು ಪೋಲಾಗುತ್ತಿರುತ್ತದೆ ಆದ್ದರಿಂದ ರಿಪೇರಿ ಮಾಡಿಸಿಕೊಡಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ರಿಪೇರಿ ಮಾಡಿಸಿಕೊಡಲಾಗುವುದು ಎಂದು ತಿಳಿಸಿದರು. | - |
| 9. | ಶ್ರೀ ನಾಗೇಂದ್ರ ಸದಸ್ಯರು ನಂಜುಂಡೇಶ್ವರನಗರದ ಎರಡನೇ ಅಡ್ಡರಸ್ತೆಯಲ್ಲಿ ವಿದ್ಯುತ್ ದೀಪದ ಕಂಬಗಳು ಇರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ಸ್ಥಳ ಪರಿವೀಕ್ಷಿಸಲು ತಿಳಿಸಿದರು. | ಬೀದಿ ದೀಪ ನಿರ್ವಹಣೆ ಇಲಾಖೆ |
| 10. | ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಿ ವಾರ್ಡ್ ಕಮಿಟಿ Whatsapp Group ನಲ್ಲಿ ಪ್ರತಿನಿತ್ಯ ಹಾಕುತ್ತೇವೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 11. | ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು ರವರು ರಕ್ಷ ಆಸ್ಪತ್ರೆ ಹತ್ತಿರ ಇರುವ ಬ್ಲಾಕ್ ಸ್ಪಾಟ್ ಅನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಮಾರ್ಷಲ್ ರವರಿಗೆ ಕಸ ಹಾಕುವವರಿಗೆ ದಂಡವಿಧಿಸಲು ಸೂಚಿಸಿದರು. | ಘನತ್ಯಾಜ್ಯ ಇಲಾಖೆ |
| 12. | ಶ್ರೀ ನಾಗೇಂದ್ರ ಸದಸ್ಯರು ರವರು ಐ ಮಾಸ್ಟ್ ರಿಪೇರಿ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಕಾರ್ಯದರ್ಶಿ ರವರು 16 ಐ ಮಾಸ್ಟ್ ರಲ್ಲಿ 6 ಐ ಮಾಸ್ಟ್ ರಿಪೇರಿ ಮಾಡಲಾಗಿರುತ್ತದೆ ಹಾಗೂ ರಿಪೇರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು. | ಬೀದಿ ದೀಪ ನಿರ್ವಹಣೆ ಇಲಾಖೆ |
| 13. | ಶ್ರೀ ನಂಜೇಗೌಡ ಸದಸ್ಯರು ರವರು ಕೃಷ್ಣಾನಂದನಗರದ ಮುನೇಶ್ವರ ದೇವಸ್ಥಾನದ ಹತ್ತಿರ ಮರ ಹುಳತಿಂದು ಬೀಳುವ ಸ್ಥಿತಿಯಲ್ಲಿರುತ್ತದೆ ಆದ್ದರಿಂ ಕಟಾವು ಮಾಡಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ಸಮಸ್ಯೆ ಪರಿಹರಿಸಲು ತಿಳಿಸಿದರು. | ಅರಣ್ಯ ಸಂರಕ್ಷಣಾ ಇಲಾಖೆ |
| 14. | ಶ್ರೀ ನಾಗೇಂದ್ರ ಸದಸ್ಯರು ರವರು ಪಾದಾಚಾರಿ ಮಾರ್ಗಗಳಲ್ಲಿ ನಿರ್ಮಿಸಿರುವ ಟ್ರಾನ್ಸ್‌ಫಾರ್‌ಮರ್‌ಗಳ ಪಟ್ಟಿಯನ್ನು ಕೋರಿದರು. ಇದಕ್ಕೆ ಶ್ರೀ ದಿನೇಶ್‌ಕುಮಾರ್ ಬೆಸ್ಕಾಂ ಅಧಿಕಾರಿ ರವರು ಮುಂದಿನ ಸಭೆಯಲ್ಲಿ ನೀಡಲಾಗುವುದು ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |
| 15. | ಶ್ರೀ ವೈ.ಆರ್ ವೆಂಕಟೇಶ್ ರವರು ಗಜಾನನ ಸ್ಲಂ-1 ದೇವಸ್ಥಾನದ ಹತ್ತಿರ ಇರುವ ವಿದ್ಯುತ್ ಕಂಬವನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಶ್ರೀ ದಿನೇಶ್‌ಕುಮಾರ್ ಬೆಸ್ಕಾಂ ಅಧಿಕಾರಿ ರವರು ಸ್ಥಳ ಪರಿಶೀಲಿಸಲಾಗುವುದು ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |
| 16. | ಶ್ರೀ ವೈ.ಆರ್ ವೆಂಕಟೇಶ್ ರವರು ಗಜಾನನ ಸ್ಲಂ-1 ರಲ್ಲಿ ಗೋವರ್ಧನ್ ಚಿತ್ರ ಮಂದಿರದ ಪಕ್ಕದ ರಸ್ತೆ, ಹಾಗೂ ಆರ್.ಜಿ ರಾಯಲ್ ರಸ್ತೆಗಳಲ್ಲಿ ವಿದ್ಯುತ್ ದೀಪಗಳು ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ಸಮಸ್ಯೆ ಪರಿಹರಿಸಲು ತಿಳಿಸಿದರು. | ಬೆಸ್ಕಾಂ ಇಲಾಖೆ |
| 17. | ಶ್ರೀ ವೈ.ಆರ್ ವೆಂಕಟೇಶ್ ರವರು ಅಸೆಟ್ಜ್ ಅಪಾರ್ಟ್‌ಮೆಂಟ್ ರಸ್ತೆಯ ಹತ್ತಿರ ಹೆಣ್ಣು ಮಕ್ಕಳು ಒಡಾಡುವಾಗ ಅನಾಮಿಕರು ತೊಂದರೆ ಮಾಡುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಿಸಿ ಕ್ಯಾಮರಾವನ್ನು ಅಳವಡಿಸಲಾಗುವುದು ಎಂದು ತಿಳಿಸಿದರು. | - |
| 18. | ಶ್ರೀ ಬಿ.ಆರ್ ಪುಟ್ಟಸ್ವಾಮಿ ರವರು ಕೃಷ್ಣಾನಂದನಗರ ಡೈರಿ ಹತ್ತಿರ ಪಾದಾಚಾರಿ ಮಾರ್ಗದಲ್ಲಿ ಹೂ ಮಾರುವವರನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಪೋಲೀಸ್ ಇಲಾಖೆ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಮಸ್ಯೆ ಪರಿಹರಿಸಲು ಸೂಚಿಸಿದರು. | - |
| 19. | ಕಾರ್ಯದರ್ಶಿಗಳು ಸೋಮವಾರದಿಂದ ಶಂಕರನಗರ ವ್ಯಾಪ್ತಿಯಲ್ಲಿ ಉಳಿಕೆ ಡಾಂಬರು ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುವುದು ಎಂದು ತಿಳಿಸಿದರು. | - |
| 20. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | - |

ಅಧ್ಯಕ್ಷರು

L. Venkatesh

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner